ನನ್ನ ತಾಲೂಕಿಗಾಗಿ ಶ್ರೀಮಾನ್ ವೀರೇಂದ್ರ ಪಾಟೀಲರು ಪ್ರಪ್ರಥಮವಾಗಿ ಶಂಕುಸ್ಥಾಪನೆ ಮಾಡಿ, ಅದರ ಜೊತೆಗೆ ಮೈಸೂರು, ಶಿವಮೊಗ್ಗ ಸೇರಿಸದಂತೆ 18 ಪಟ್ಟಣಗಳಿಗಾಗಿ ಶಂಕುಸ್ಥಾಪನೆ ಮಾಡಿದರು. ಆ ಯೋಜನೆಗಳೆಲ್ಲ ಕುಂಠಿತವಾಗಿವೆ. ನನಗನ್ನಿಸುತ್ತದೆ, ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಆ ಯೋಜನೆಗಳನ್ನು ಕಾರ್ಯಗತಮಾಡಲಿಲ್ಲವೆಂದು ಆ ಶಂಕುಸ್ಥಾಪನೆ ಮಾಡಿದ್ದಕ್ಕೆ ಅಪಚಾರ ಮಾಡಿದಂತಾಗುತ್ತದೆ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ವಯೋಮಿತಿ ಹೆಚ್ಚಿಸುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ನೇಮಕಾತಿ ಬಗ್ಗೆ 13-2-96ರಲ್ಲಿ ಅರ್ಜಿಗಳನ್ನು ಕರೆದಿದ್ದೀರಿ. ಮೊದಲ ಬಾರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ 26 ವರ್ಷ, ಇತರೆ ಅಭ್ಯರ್ಥಿಗಳನ್ನು 24 ವರ್ಷವೆಂದು ನಿಗಧಿ ಮಾಡಿದ್ದೀರಿ. ಬಹುಶ ಒಬ್ಬ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ವಿದ್ಯಾರ್ಥಿ ಅವನು ಡಿಗ್ರಿ ಇಲ್ಲವೇ ಡಬ್ಬಲ್ ಡಿಗ್ರಿ ಮಾಡಿಕೊಂಡು ಇರುವವನಿಗೆ ಅವಕಾಶ ಸಿಗುವುದಿಲ್ಲ. ಬಹುಶ ಇದುವರೆಗೆ ಎಂದೂ ಈ ರೀತಿಯಾಗಿರಲಿಲ್ಲ. ಏನಾದರೂ ಕೊರತೆಯಾಗಿದೆಯೇನೋ ಗೊತ್ತಿಲ್ಲ. ನಾನು ನಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ 28 ವರ್ಷವಾದರೂ ಮಾಡಿ, ಇತರೆ ವರ್ಗದವರಿಗೆ 28 ವರ್ಷವಾದರೂ ಮಾಡಿ. ಎಲ್ಲರಿಗೂ ಅವಕಾಶ ಸಿಗುತ್ತದೆ, ದಯಮಾಡಿ ಅದನ್ನು ಸರಿಪಡಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಎತ್ತಿರತಕ್ಕಂತಹ ವಿಚಾರ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರತಕ್ಕಂತಹ ವಿಚಾರವಾಗಿದೆ. ಪೋಲಿಸ್ ಕಾನ್‌ಸ್ಟೇಬಲ್‌ಗಳು ಮತ್ತು ಪಿಎಸ್‌ಐಗಳ ಏಜ್ ಲಿಮಿಟ್‌ನ್ನು ರಿಲ್ಯಾಕ್ಸ್ ಮಾಡುತ್ತೇವೆಂದು ಇದೆ. ಸಬ್‌ಇನ್ಸ್‌ಪೆಕ್ಟರ್, ವಿಮೆನ್ಸ್ ಪೋಲಿಸ್ ಕಾನ್‌ಸ್ಟೇಬಲ್, ವಿಮನ್ ಸಬ್‌ಇನ್ಸ್‌ಪೆಕ್ಟರ್ ಎಲ್ಲರ ಏಜ್ ಲಿಮಿಟ್ ಅನ್ನು ಬರೀ ಎಸ್.ಸಿ., ಎಸ್.ಟಿ. ಬ್ಯಾಕ್‌ವರ್ಡ್ ಕ್ಲಾಸ್ ಅಷ್ಟೇ ಅಲ್ಲ, ಇನ್ ಜನರಲ್ ಹೆಚ್ಚಿಗೆ ಮಾಡಬೇಕೆಂದು ನಮ್ಮ ನಿರ್ಧಾರ ಇದೆ. ಅದನ್ನು ನಾವು ಮಾಡುತ್ತಿದ್ದೇವೆ. ಇದಕ್ಕೋಸ್ಕರ ಸಂಬಂಧಪಟ್ಟಂತಹ ಅಮೆಂಡ್‌ಮೆಂಟ್ ತರಲಿಕ್ಕೆ ಕ್ರಮ ತೆಗೆದುಕೊಂಡಿದದ್ದೇವೆ. ಏತನ್ಮಧ್ಯೆ ಇದನ್ನು ಮಾಡಲಿಕ್ಕೆ ಕೊನೇ ಪಕ್ಷ 6 ತಿಂಗಳಾದರೂ ಬೇಕಾಗುತ್ತದೆ ಕಾನೂನು ಬದ್ಧವಾಗಿ ಮಾಡಬೇಕಾದರೆ ಇಷ್ಟು ಸಮಯ ಬೇಕಾಗುತ್ತದೆ. ಈ ಮಧ್ಯೆ 800 ಸಬ್ ಇನ್ಸ್‌ಪೆಕ್ಟರ್‌ಗಳ ಜಾಗ ಖಾಲಿ ಇದೆ ಎಲ್ಲ ಕಡೆ ನೇರ ನೇಮಕಾತಿಗೆ ಹಾಕಿಕೊಡಿ ಎಂದು ಹೇಳುತ್ತಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಅವರು ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ 154 ಜನ ಪಿಎಸ್‌ಐ ಮತ್ತು ಆರ್‌ಪಿಐ.ಗಳನ್ನು ಸೆಲೆಕ್ಷನ್ ಮಾಡಿ ತರಬೇತಿಗೆ ಕಳಿಸಿ ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಈಗ ತರಬೇತಿ ಮುಗಿದಿದೆ ಅವರಿಗೆಲ್ಲಾ ಪ್ರಾಕ್ಟಿಕಲ್ ತರಬೇತಿಗೆ

ಕಳಿಸಿದ್ದೇವೆ. ಇನ್ನು 5-6 ತಿಂಗಳಲ್ಲಿ ಅವರುಗಳೆಲ್ಲ ಪೋಲೀಸ್ ಸ್ಟೇಷನ್‌ನಲ್ಲಿ ಕೆಲಸ ಮಾಡುತ್ತಾರೆ. The process should contine. ಅದಕ್ಕೋಸ್ಕರವಾಗಿ We are taking 150 with the existing rule. ಮುಂದಿನ ಸಲ ಮಾಡತಕ್ಕಂತಹ ಸಂದರ್ಭದಲ್ಲಿ 6 ತಿಂಗಳಾದ ಮೇಲೆ ಇನ್ನೊಂದು ಬ್ಯಾಚ್ ತೆಗೆದುಕೊಳ್ಳುತ್ತಿದ್ದೇವೆ. ಆಗ ಏಜ್ ರಿಲ್ಯಾಕ್ಷೇಷನ್ ಮಾಡುತ್ತೇವೆ. Already we have issued notification in that direction.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೆ ರೆಕ್ರೂಟ್ ಮೆಂಟ್ ಮಾಡುವಾಗ 60 ಪರ್ಸೆಂಟ್ ಮೀಸಲಾತಿ ಇತ್ತು ಈ ವರ್ಷ ನೇಮಕಾತಿ ಮಾಡತಕ್ಕಂತಹ ಸಂದರ್ಭದಲ್ಲಿ ತರಬೇತಿ ತೆಗೆದುಕೊಂಡವರು ಕೆಲಸಕ್ಕೆ ಸೇರುವಾಗ 50 ಪರ್ಸೆಂಟಿಗೆ ಇಳಿಸಿದ್ದೀರಿ. ಇದರಿಂದಾಗಿ 15-20 ಜನರಿಗೆ ತೆಗೆದುಕೊಂಡರೆ ಯಾಗುವುದಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಇದರ ಬಗ್ಗೆ ಮೇಲಿನ ಮನೆಯಲ್ಲಿ ಉತ್ತರ ಕೊಟ್ಟಿದ್ದೇನೆ. ದೀರ್ಘವಾಗಿ ಚರ್ಚೆ ಕೂಡ ಆಗಿದೆ. ಹಿಂದೆ ಸೆಲೆಕ್ಷನ್ ಮಾಡಿದಂತಹ ಸಂದರ್ಭದಲ್ಲಿ 68 ಪರ್ಸೆಂಟ್ ಮೀಸಲಾತಿ ಇತ್ತು. ಸುಪ್ರೀಂ ಕೋರ್ಟಿನಲ್ಲಿ 50ಪರ್ಸೆಂಟಿಗೆ ಮೀಸಲಾತಿಯನ್ನು ಇಳಿಸಬೇಕೆಂದು ಹೇಳಿದ ಮೇಲೆ 13 ಜನರಿಗೆ ಕೆಲಸ ಹೋಗಿದೆ. ತೆಗೆದು ಹಾಕಿರುವ ಆ 13 ಜನರಲ್ಲಿ ಒಬ್ಬರನ್ನು ಎಕ್ಸ್‌ಸರ್ವೀಸ್ ಮೆನ್ ಕೋಟಾದಲ್ಲಿ ಸೆಲೆಕ್ಟ್ ಮಾಡಿದ್ದರೆ. ಇದೆಲ್ಲಾ ಡಿಜಿಪಿ ಲೆವೆಲ್‌ನಲ್ಲಿ ಸೆಲೆಕ್ಷನ್ ಸಮಿತಿಯಲ್ಲಿ ಆಗತಕ್ಕಂಥ ಕೆಲಸ ಏತನ್ಮಧ್ಯೆ 12-13 ಜನರನ್ನು ಏನು ಕೆಲಸದಿಂದ ತೆಗೆದಿದ್ದರು, ಅವರ ತರಬೇತಿಗೆಂದು 55 ಲಕ್ಷ ರೂಪಾಯಿಗಳನ್ನು ಸರಕಾರವೇ ಏರ್ಪು ಮಾಡಿದೆ. ವೇಕೆನ್ಸಿಗಳು ಇವೆ ಹೀಗಾಗಿ ಹಿಂದಿನ ಸೆಲೆಕ್ಷನ್ ಲಿಸ್ಟ್ ಇದೆಯಲ್ಲ ಅದೆಲ್ಲ ಕಂಪ್ಯೂಟರ್ ಮೂಲಕ ಮಾಡಿದ್ದಾರೆ ಫಿಸಿಕಲ್ ಎಕ್ಸಾಮಿನೇಷನ್ ಮಾಡಿದ್ದಾರೆ ಅದರ ಆಧಾರದ ಮೇಲೆ ಇಲ್ಲಿ ಇರುವ 12 ಜನರಿಗೆ ಅಕಾಮಡೇಟ್ ಮಾಡಬಹುದು, ಇವರಿಗೆ ತರಬೇತಿಯಾಗಿದೆ. 55 ಲಕ್ಷ ವೇಸ್ಟ್ ಆಗುತ್ತದೆಂದು ಅದೇ ಲಿಸ್ಟ್‌ನಲ್ಲಿ ವೇಕೆನ್ಸಿಗಳ ನಂಬರ್‌ನ್ನು ಇನ್‌ಕ್ರೀಸ್ ಮಾಡಿ 62-12=74 ಜನರಿಗೆ ಕಾನೂನಿನ ತೊಡಕು ಇಲ್ಲದೇ ಹೋದರೆ ತೆಗೆದುಕೊಳ್ಳಬೇಕೆಂಬ ತೀರ್ಮಾನ ಸರಕಾರದ ಮುಂದಿದೆ, ಒಂದೆರಡು ದಿನಗಳಲ್ಲಿ ಇದರ ಬಗ್ಗೆ ಆಜ್ಞೆ ಹೊರಡಿಸುತ್ತೇವೆ.

ಶ್ರೀ ವೈ. ರಾಮಕೃಷ್ಣ : ಎಸ್ ಟಿ ಯವರಿಗೆ ಹೀಗೆ ಆಗುವುದಿಲ್ಲವೆಂದು ಹೇಳಿದಿರಿ. ನಾನು ತಮ್ಮಲ್ಲಿ ಒಂದು ಸಲಹೆ ಕೊಡುತ್ತಿದ್ದೇನೆ. ಕೇವಲ ಎಸ್.ಸಿ.ಯವರಿಗೆಂದೇ ಸ್ಪೆಷಲ್ ರೆಕ್ರೂಟ್ ಮೆಂಟ್ ರೂಲ್ಸ್ ಎಂದು ಮಾಡುತ್ತಿರೋ? ಈ ಲಿಸ್ಟ್ ಸ್ವಲ್ಪ ತಡವಾದರೂ ಚಿಂತೆ ಇಲ್ಲ, ನೀವು ಆ ಪ್ರಾವಿಜನ್‌ನಲ್ಲಿ 5 ವರ್ಷ ಜಾಸ್ತಿ ಕೊಟ್ಟು ಎಲ್ಲರಿಗೂ ಬರುವುದಕ್ಕೆ ಅವಕಾಶ ಮಾಡಿಕೊಡುತ್ತೀರೋ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಏಜ್ ಇನ್ ಕ್ರೀಸ್ ಮಾಡುವ ಬಗ್ಗೆ ಗೆಜೆಟ್ಟಿನಲ್ಲಿ ಹಾಕಿ ಎಲ್ಲ ಮಾಡಬೇಕು. Process has already started. Already it has been

Gazetted. So, it is question of time. ಇನ್ನು 6-7 ತಿಂಗಳು ಅದಕ್ಕೋಸ್ಕರ ವೇಸ್ಟ್ ಆಗುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಪಿಎಸ್ಐ ಸೆಲೆಕ್ಷನ್‌ಗಳಿಗೆ ಮಾನ್ಯ ಗೃಹ ಮಂತ್ರಿಗಳು 13 ಜನರು ತರಬೇತಿಗೆ ಹೋಗಿದ್ದರು ಅವರಿಗೆ ಅಕೂಮಡೇಟ್ ಮಾಡಬೇಕೆಂದು ಹೇಳಿದ್ದರು. ಆದರೆ ಸುಮಾರು 68 ಪರ್ಸೆಂಟ್ ಪ್ರಕಾರ ಸೆಲೆಕ್ಷನ್ ಆದಾಗ 35-36 ಜನರಿದ್ದು ಗೆಜೆಟ್ ಕೂಡ ಆಗಿದೆ ಅವರು ಫಿಸಿಕಲ್ ಟೆಸ್ಟ್ ಇತರೆ ಟೆಸ್ಟ್‌ಗಳನ್ನೂ ಮುಗಿಸಿದ್ದಾರೆ. ಇನ್ನು 74 ಸೀಟು ತುಂಬಬೇಕೆಂದು ಇರುವುದರಿಂದ ಈ 13 ಜನ ತರಬೇತಿಗೆ ಹೋದವರ ಜೊತೆಗೆ ಆ ಉಳಿದ ಜನರನ್ನು ಕೂಡ ಅಂದರೆ ಗೆಜೆಟ್‌ನಲ್ಲಿ ಏನು ಅನೌನ್ಸ ಮಾಡಿ ಸೆಲೆಕ್ಷನ್ ಆಗಿದೆ ಎಂದು ಹೇಳಿದಿರಿ ಅವರೆಲ್ಲರಿಗೂ ಆರ್ಡರ್ ಕೊಟ್ಟರೆ ಅನುಕೂಲವಾಗುತ್ತದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ದೀರ್ಘವಾಗಿ ನಾನು ಉತ್ತರ ಕೊಟ್ಟಿದ್ದೇನೆ. 12 ಜನರಿಗೆ ಅಕಾಮಡೇಟ್ ಮಾಡುವುದು ಒಂದು ವೇಕೆನ್ಸೀಸ್ ಇದೆ ಅದನ್ನು ಫಿಲಪ್ ಮಾಡಿದ ಹಾಗಾಗುತ್ತದೆ. ಅದಲ್ಲದೆ 62 ಜನರನ್ನೂ ತೆಗೆದುಕೊಳ್ಳಬೇಕೆಂದು ವಿಚಾರವನ್ನು ಸರಕಾರ ಗಂಭೀರವಾಗಿ ವಿಚಾರ ಮಾಡುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ಇರತಕ್ಕಂತಹ ಮೀಸಲಾತಿ 68 ಪರ್ಸೆಂಟ್. ಆಮೇಲೆ 50 ಪರ್ಸೆಂಟ್ ಎಂದು ಮಾಡಿದ ಮೇಲೆ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಇರತಕ್ಕಂತಹ 23 ಪರ್ಸೆಂಟಿನಿಂದ ಮತ್ತೆ ಅವರನ್ನು 18 ಪರ್ಸೆಂಟಿಗೆ ತಂದಿದ್ದಾರೆ. ಇದು ಸಂವಿಧಾನದಲ್ಲಿರತಕ್ಕಂಥಹ ಅವಕಾಶ. As far as Scheduled Casste is concerned The other reservation is, ಸಬ್ಜೆಕ್ಟ್ ಟು ಆರ್ಟಿಕಲ್ 16 ಮತ್ತು 15ರ ಪ್ರಕಾರ ಆದರೆ ಉಳಿದಂತಹವರಿಗೆ ಸ್ಪೆಸಿಫಿಕ್ ಆಗಿ ಷೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ಸಂವಿಧಾನತ್ಮಕವಾದ ಗ್ಯಾರಂಟಿ ಇನ್ ಪ್ರೊಪರೇಷನ್ ಟುದಿ ಪಾಪ್ಯುಲೇಷನ್ ಅವರಿಗೆ ಮೀಸಲಾತಿ ಕೊಡಬೇಕೆಂದಾಗ ಗುಜರಾತ್ ಅಂತಹ ಕಡೆ 27 ಪರ್ಸೆಂಟ್ ಇದೆ. ಷೆಡ್ಯೂಲ್ಡ ಟ್ರೈಬ್‌ನವರೇ 17 ಪರ್ಸೆಂಟ್ ಇದ್ದಾರೆ. ಮಹಾರಾಷ್ಟ್ರದಲ್ಲಿ, ಬಿಹಾರದಲ್ಲಿ ಆಗ ಷೆಡ್ಯೂಲ್ಡ ಕ್ಯಾಸ್ಟ್ ಬುದ್ದಿಸ್ಟ್ ಆದ್ದರಿಂದ ಅಲ್ಲಿ 42 ಸೀಟು ಮೀಸಲಾತಿ ಇದ್ದರೆ ಇವತ್ತು ಬರೀ 16 ಇದೆ. 8 ಪಾರ್ಲಿಮೆಂಟ್ ಜನರಲ್ ಇದ್ದರೆ ಇವತ್ತು 4 ಉಳಿದಿದೆ. ಏಕೆಂದರೆ ಸೆನ್ಸ್‌ಸ್‌ನಲ್ಲಿ ಬುದ್ದಿಸ್ಟ್ ಎಂದು ಬರೆದರು. ಮೊನ್ನೆ ನೀವು ಬುದ್ದಿಸ್ಟ್‌ಗೆ ಕೊಡಬೇಕೆಂದು ಹೇಳಿದಾಗ 91 ಸೆನ್ಸಸ್ ಪ್ರಕಾರ ಅಂದರೆ ಮುಂದಿನ ಚುನಾವಣೆಗೆ ಬರುತ್ತದೆ. ಅದಕ್ಕೆ ಯಾವಾಗ ಪೀಪಲ್ಸ ರೆಪ್ರೆಸೆಂಟೇಟಿವ್ ಆಕ್ಟ್ ಪ್ರಕಾರ ದಿ ಪ್ರಪೋರ್ಷನ್ ಟು ದಿ ಪಾಪ್ಯುಲೇಷನ್ ನಾವು ಮೀಸಲಾತಿ ಇರಬೇಕೆಂದಾಗ ಇವರು ಮೀಸಲಾತಿ ಕಡಿಮೆ ಮಾಡತಕ್ಕಂತಹ ಅವಶ್ಯಕತೆ ಇರಲಿಲ್ಲ. ತರಾತುರಿಯಲ್ಲಿ ಹೋದ ಸಲವೂ ಕೂಡ ಕೊನೇ ಗಳಿಗೆಯಲ್ಲಿ ಚುನಾವಣೆ ಬಂದಾಗ ನಮ್ಮ ಸರಕಾರದಲ್ಲೂ ಕೂಡ ಪುಷ್ ಮಾಡಿದರು, ಸುಪ್ರೀಂ ಕೋರ್ಟ್ ಹೆಸರಿನ ಮೇಲೆ ಅದು

ಬಂತು. ಆಸ್ ಫಾರ್ ಆಸ್ ಎಸ್.ಸಿ. ಅಂಡ್ ಎಸ್.ಟಿ. ಕನ್ಸರ್ನ್ಡ್ in proportion to their population. ಮೀಸಲಾತಿ ನೀವು ಇದಿ. ಉಳಿದಂತಹವು ಬೇಕಾದರೆ ಅಲ್ಲೊಂದು ಪರ್ಸೆಂಟ್ ಇಲ್ಲೊಂದು ಪರ್ಸೆಂಟ್ ಕದಿಮೆ ಮಾಡಿ ಅಡ್ಜಸ್ಟ್ ಮಾಡಿ. ಇಲ್ಲದಿದ್ದರೆ ದೊಡ್ಡ ಅನ್ಯಾಯವಾಗುತ್ತದೆ. ಬೇರೆ ಕಡೆ ಹೇಗೆ ಇದೆ ಹಾಗೆ ಮಾಡಬೇಕು. ಇಡೀ ದೇಶದಲ್ಲಿ ಹೇಗೆ ಇದೆ ಹಾಗೆ ಮಾಡಿ. ಇನ್ ಪ್ರೊಪರೇಷನ್ ಟುದಿ ಪಾಪ್ಯುಲೇಷನ್ ಎಂದು ಏನು ಇದೆ ಅದನ್ನು ಇಟ್ಟುಕೊಳ್ಳಬೇಕು. ಉಳಿದುದ್ದನ್ನು ಯಾವ ರೀತಿಯಾಗಿ ಪಾಪ್ಯುಲೇಷನ್ ಪ್ರಕಾರ ನೀವೇನು ಇಟ್ಟುಕೊಳ್ಳುತ್ತೀರಿ ಅದನ್ನು ಇದಿ. ಒಂದು ಕಡೆ 5-10 ಕೊಟ್ಟಿರಬಹುದು. ಅದನ್ನು ಸರಿಪಡಿಸಿಕೊಳ್ಳಿ. ಆದರೆ ಇದಕ್ಕೆ ಧಕ್ಕೆ ಕೊಟ್ಟರೆ ರೆಕ್ರೂಟ್ ಮೆಂಟಿನಲ್ಲೂ ಧಕ್ಕೆಯಾಗುತ್ತದೆ, ನಾಳೆ ಎಸ್ಇಪಿ ಹಣದಲ್ಲಿ ಧಕ್ಕೆಯಾಗುತ್ತದೆ. ಯಾವುದೇ ಒಂದು ಬಾಬತ್ತಿನಲ್ಲಿ ನೀವು ಕೊಡತಕ್ಕಂತಹ ಸಹಾಯ ಸರಿಯಾದ ರೀತಿಯಲ್ಲಿ ಅವರಿಗೆ ದೊರೆಯುವುದಿಲ್ಲ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಯೋಜನೆ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬೇರೆ ರಾಜ್ಯಗಳಲ್ಲಿ ಹೇಗೆ ಮಾಡಿದ್ದಾರೆನ್ನುವುದನ್ನು ತರಿಸಿಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡಿ ಇದನ್ನು ಪರಿಶೀಲನೆ ಮಾಡುವ ವ್ಯವಸ್ಥೆಯನ್ನು ನಾನು ತಮ್ಮ ಮೂಲಕ ಸದನಕ್ಕೆ ಕೊಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಬಂದಿಲ್ಲ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯ ಮಂತ್ರಿಗಳು ಕುರುಬರ ಸಮಾವೇಶದಲ್ಲಿದ್ದಾರೆ, ನನಗೆ ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಹೇಳತಕ್ಕಂತಹ ವಿಚಾರಗಳನ್ನು ನಾನು ಅವರ ಪರವಾಗಿ ನೋಟ್ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಬಂದ ಮೇಲೆ ಉತ್ತರ ಕೊಡುತ್ತಾರೆ.

4.30 ಪಿ.ಎಂ.

ನಿಯಮ 69ರ ಮೇರೆಗೆ

ಕೃಷ್ಣಾ ನದಿನೀರನ್ನು 2000 ಇಸವಿಯೊಳಗೆ ಸಂಪೂರ್ಣವಾಗಿ ಬಳಸಿಕೊಳ್ಳುವ ಬಗ್ಗೆ

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಪ್ರಕಾರ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ರೈತರ ಬವಣೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ದಿನಾಂಕ 09-2-1996ರಲ್ಲಿ ಈ ಅಧಿವೇಶನ ಪ್ರಾರಂಭವಾದ ಮೊದಲನೇ ದಿವಸ ನಾವು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ನೋಟೀಸು ಕೊಟ್ಟಿದ್ದೇವೆ. ಇದು ಅತ್ಯಂತ ಪ್ರಮುಖವಾದ ವಿಷಯ ಇದರ ಬಗ್ಗೆ ಪ್ರಾರಂಭದ ದಿವಸ ದಲ್ಲೇ ಪ್ರಸ್ತಾಪವಾಗಬೇಕು, ಚರ್ಚೆಯಾಗಬೇಕು, ಸದನದ ಕಾರ್ಯಕಲಾಪ ಮುಗಿಯುವುದರೊಳಗಾಗಿ ಇದಕ್ಕೇನಾದರೂ ಪರಿಹಾರ ಹುಡುಕಿ ಆ ಭಾಗದ